# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 13/2025

ದಿನಾಂಕ - 12.05.2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಚಿತ್ತಯ್ಯ | ಪ್ರಾ.ಸಾ. | - | 05 |
| ತಂದೆಯ ಹೆಸರು | - | ಚನ್ನಪ್ಪ | ಚಾ.ಸಾ. | - | 04 |
| ವಯಸ್ಸು | - | 62 ವರ್ಷ | | | |
| ಉದ್ಯೋಗ | - | ಚಾಲಕ | | | |
| ವಾಸ ಸ್ಥಳ | - | ಚಳ್ಳಕೆರೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ನನಗೆ ಈ ಕೇಸಿನ ಚಾಸಾ-1 ರಿಂದ 3 ಮತ್ತು 5 ಇವರು ಗೊತ್ತಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ ಮತ್ತು ಅವರ ಬಗ್ಗೆ ನನಗೆ ಗೊತ್ತಿಲ್ಲ.

ಆರೋಪಿ ಮತ್ತು ನನ್ನ ಮಧ್ಯೆ ಯಾವುದೇ ಗಲಾಟೆ ಆಗಿರುವುದಿಲ್ಲ ಮತ್ತು ಆರೋಪಿಯು ನನಗೂ, ಚಾಸಾ-2 ಮತ್ತು 3 ಇವರಿಗೆ ಚಾಕುವಿನಿಂದ ಹಲ್ಲೆ ಮಾಡಿ ಗಾಯಗೊಳಿಸಿರುವುದಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಮತ್ತು ನನ್ನನ್ನು ನೂಕಿ, ನನ್ನ ಕಾಲಿಗೆ ಯಾವುದೇ ಗಾಯ ಮಾಡಿರುವುದಿಲ್ಲ. ನಾನು ಯಾವುದೇ ದಿನದಂದು ಆರೋಪಿಯ ವಿರುದ್ದ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿಕೆಯ ಮೇರೆಗೆ*

ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**– ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ –**

ದಿಃ 14.11.2024 ರಂದು ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದು, ಸದರಿ ಹೇಳಿಕೆಯಲ್ಲಿ ದಿಃ 13.11.2024 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಚಳ್ಳಕೆರೆ ಪಟ್ಟಣದ ಬಳ್ಳಾರಿ ರಸ್ತೆಯಲ್ಲಿರುವ ಇಂಜಿನಿಯರಿಂಗ್ ಕಾಲೇಜು ಬಳಿಯ ಕರೇಕಲ್ಲು ಕೆರೆ ಕಟ್ಟೆಯ ಸಿಮೆಂಟ್ ಮೆಟ್ಟಿಲುಗಳ ಮೇಲೆ ನಾನು, ಚಾಸಾ–1 ರಿಂದ 3 ಮಾತನಾಡುತ್ತಾ ಕುಳಿತಿದ್ದೆವೆಂದು, ಆ ವೇಳೆಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯಾದ ಚಕ್ರವರ್ತಿ ನಮ್ಮ ಬಳಿ ಬಂದು ನನಗೆ ಕುಡಿಯಲು ರೂ.500/– ದುಡ್ಡು ಕೊಡಿ ಎಂದು ಕೇಳಿದನೆಂದು, ಆಗ ನಾವು ನಮ್ಮ ಬಳಿ ದುಡ್ಡು ಇಲ್ಲವೆಂದು ಆತನಿಗೆ ಹೇಳಿದೆವೆಂದು, ಆಗ ನಮಗೂ ಮತ್ತು ಆರೋಪಿಗೂ ಮಾತಿಗೆ ಮಾತು ಬೆಳೆದು ಜಗಳ ಶುರುವಾಯಿತೆಂದು, ಆಗ ಆರೋಪಿಯು ತನ್ನ ಜೇಬಿನಿಂದ ಕಟರ್ ನ್ನು ತೆಗೆದು ನಮ್ಮನ್ನು ಕುರಿತು, ಸೂಳೇಮಕ್ಕಳಾ, ಬೋಳಿಮಕ್ಕಳಾ ದುಡ್ಡು ಇಲ್ಲಾ ಅಂತಾ ಹೇಳುತ್ತೀರಾ ಎಂದು ಬಾಯಿಗೆ ಬಂದಂತೆ ಬೈದಾಡಿ ಕಟರ್ ನಿಂದ ಕುತ್ತಿಗೆಗೆ ಹಾಕಿ ಗಾಯಗೊಳಿಸಿದರೆ ಸಾವು ಸಂಭವಿಸಬಹುದೆಂದು ಗೊತ್ತಿದ್ದೂ ಕೂಡ ಆತನು ನಮ್ಮನ್ನು ಸಾಯಿಸುವ ಉದ್ದೇಶದಿಂದ ಚಾಸಾ–2 ಇವರಿಗೆ ಕಟರ್ ನಿಂದ ಎರಡು ಬಾರಿ ಕುತ್ತಿಗೆಯ ಬಳಿ ಹಾಕಿದ್ದು, ಇದರಿಂದ ಚಾಸಾ–2 ಇವರ ಕುತ್ತಿಗೆ ಬಳಿ ಮತ್ತು ಗಲ್ಲದ ಕೆಳಗಡೆ ರಕ್ತಗಾಯವಾಯಿತೆಂದು, ಆಗ ಬಿಡಿಸಲು ಬಂದ ಚಾಸಾ–3 ಇವರಿಗೆ ಆರೋಪಿಯು ಅದೇ ಕಟರ್ ನಿಂದ ಕುತ್ತಿಗೆಗೆ ಹಾಕಿದ್ದು, ಅದರಿಂದ ಆತನ ಕುತ್ತಿಗೆ ಬಳಿ ರಕ್ತಗಾಯವಾಯಿತೆಂದು ಆಗ ನಾನು ಮತ್ತು ಚಾಸಾ–1 ಕೂಡಿ ಗಲಾಟೆ ಬಿಡಿಸಲು ಹೋಗಿದ್ದು, ಆಗ ಆರೋಪಿಯು ನಮ್ಮನ್ನು ನೂಕಿದ್ದು ಅದರಿಂದ ನಾನು ಕೆಳಗೆ ಬಿದ್ದು, ನನ್ನ ಬಲಮೊಣಕಾಲಿನ ಬಳಿ ರಕ್ತಗಾಯವಾಯಿತೆಂದು, ನಂತರ ಗಾಯಗೊಂಡಿದ್ದ ಚಾಸಾ–2 ಮತ್ತು ನನ್ನನ್ನು ಬೈಕುಗಳಲ್ಲಿ ಚಿಕಿತ್ಸೆ ಕುರಿತು ಚಳ್ಳಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲಿಸಿದರೆಂದು ಮತ್ತು ಚಾಸಾ–2 ಇವರಿಗೆ ಹೆಚ್ಚು ಗಾಯವಾಗಿದ್ದ ಕಾರಣ ವೈದ್ಯರ ಸಲಹೆ ಮೇರೆಗೆ ಆತನನ್ನು ಆತನ ಪತ್ನಿಯಾದ ಚಾಸಾ–5 ಇವರು ಆಸ್ಪತ್ರೆಗೆ ಬಂದು ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದರೆಂದು ಹಾಗೂ ಆರೋಪಿಯು ನಮ್ಮನ್ನು ಕೊಲೆ ಮಾಡುವ ಉದ್ದೇಶ ಇಟ್ಟು ಕೊಂಡು ಮೇಲೆ ಹೇಳಿದಂತೆ ಕಟರ್ ನಿಂದ ಹಲ್ಲೆ ಮಾಡಿ ಚಾಸಾ–2 ಇವರಿಗೆ ಗಾಯಗೊಳಿಸಿರವನೆಂದು ನಾನು ಪೋಲೀಸರ ಮುಂದೆ ಈಗ ಓದಿ ಹೇಳಲಾದ ನಿಪಿ–13 ರಂತೆ ಹೇಳಿಕೆಯನ್ನು ಕೊಟ್ಟಿರುವೆನು ಎಂದರೆ ಸರಿಯಲ್ಲ.

ಈಗ ನಾನು ಮತ್ತು ಆರೋಪಿ ಕೂಡಿಕೊಂಡು ಕೇಸನ್ನು ರಾಜೀ ಮಾಡಿಕೊಂಡಿರುತ್ತೇವೆ. ನಾನು ಮತ್ತು ಆರೋಪಿ ಈಗ ರಾಜೀ ಮಾಡಿಕೊಂಡಿದ್ದು, ಆ ಕಾರಣ ನಿಪಿ–13 ರಂತೆ ನಾನು ಹೇಳಿಕೆಯನ್ನು ಕೊಟ್ಟಿದ್ದು ಮತ್ತು ನನಗೆ ಎಲ್ಲಾ ವಿಷಯ ಗೊತ್ತಿದ್ದು, ಆದರೂ ಕೂಡ ಈಗ ಆರೋಪಿ ಮತ್ತು ನಮ್ಮ ಮಧ್ಯೆ ಯಾವುದೇ ಗಲಾಟೆ ಆಗಿರುವುದಿಲ್ಲ ಹಾಗೂ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ನನ್ನನ್ನು ನೂಡಿ ಗಾಯಗೊಳಿಸಿರುವುದಿಲ್ಲ ಮತ್ತು ನಮಗೆ ಪ್ರಾಣ ಬೆದರಿಕೆಯನ್ನು ಕೂಡ ಹಾಕಿರುವುದಿಲ್ಲವೆಂದು ಈಗ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿರುವೆನು ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –**

ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.